## ವಾರ್ತಾ ವಿಶ್ಲೇಷಣೆ

### ಕತ್ತಲಿನಿಂದ ಬೆಳಕು!

ಪರಿಸರದ ಬಗ್ಗೆ ಇಂದಿನ ದಿನಗಳಲ್ಲಿ ಎಲ್ಲೆಡೆ ಆತಂಕ ಕೇಳಿಬರುತ್ತಿದೆ. ಪೃಥ್ವಿಯ ತಾಪಮಾನ ಹೆಚ್ಚುತ್ತಲೇ ಹೋಗುತ್ತಿದೆಯಂತೆ. ಇದು ಮುಂದುವರಿದರೆ ಇನ್ನು ಅರ್ಧ ಶತಮಾನದಲ್ಲಿ ಧ್ರುವ ಪ್ರದೇಶಗಳಲ್ಲಿರುವ ಹಿಮವೆಲ್ಲ ಕರಗಿ ಸಮುದ್ರಗಳ ನೀರು ಉಕ್ಕಿ ಬಂದು ಅನೇಕ ದ್ವೀಪಗಳು, ಜನವಸತಿಗಳು ಮುಳುಗಿ ಹೋಗುತ್ತವಂತೆ. ಇದನ್ನು ಜಾಗತಿಕ ತಾಪವೃದ್ಧಿ (Global Warming) ಎಂದು ಕರೆದಿದ್ದಾರೆ. ಸೂರ್ಯನ ಕಿರಣಗಳಲ್ಲಿನ ನೇರಳಾತೀತ (Ultraviolet) ಕಿರಣಗಳು ಪೃಥ್ವಿಯನ್ನು ಮುಟ್ಟದಂತೆ ಓಝೋನ್‌ನ ರಕ್ಷಾಕವಚವೊಂದು ಇದೆ. ಮಾನವನ ಪ್ರಗತಿಯ ಸಂಕೇತಗಳಾದ (?) ಕಾರ್ಖಾನೆಗಳು ಹಾಗೂ ವಾಹನಗಳು ನಿರಂತರವಾಗಿ ಹೊರಗೆಡಹುವ ಅನಿಲಗಳಿಂದ ಈ ರಕ್ಷಾಕವಚದಲ್ಲಿ ಒಂದು ದೊಡ್ಡ ರಂಧ್ರವೇ ಆಗಿಹೋಗಿದೆ. ಅದರ ವಿಸ್ತೀರ್ಣ ಹೆಚ್ಚುತ್ತ ಹೋದರೆ ಪರಿಸರದಲ್ಲಿ ಅನೇಕ ಅನಾಹುತಗಳು ಆಗುವುವು. ಅನೇಕ ಗಿಡಮರಗಳು, ಪ್ರಾಣಿಸಂಕುಲಗಳು ನಾಶವಾಗುವುವು. ನೀರಿಗಾಗಿ ಹಾಹಾಕಾರವೂ ಪ್ರಾರಂಭವಾಗುತ್ತದೆ. ಸಿಹಿನೀರಿನ ಕೊರತೆಯಿಂದ ಮಾನವನ ಅಸ್ತಿತ್ವವೂ ಗಂಡಾಂತರದಲ್ಲಿದೆ. ಇದನ್ನೆಲ್ಲ ಶಾಲೆಯ ಪಠ್ಯಪುಸ್ತಕಗಳಲ್ಲೂ ಅಳವಡಿಸಲಾಗಿದೆ. ಆದರೆ ಇದನ್ನು ತಡೆಗಟ್ಟುವಲ್ಲಿ ಸಕ್ರಿಯವಾಗಿ ಸಾಮಾನ್ಯ ಜನರು ಏನನ್ನು ಮಾಡಬಹುದು? ಬನ್ನಿ, ಆಸ್ಟ್ರೇಲಿಯಾದ ಸಿಡ್ನಿ ನಗರದ ನಿವಾಸಿಗಳಿಂದ ಸ್ವಲ್ಪ ಪಾಠ ಕಲಿಯೋಣ. The Hindu ಪತ್ರಿಕೆಯಲ್ಲಿ ೨೦೦೭ರ ಏಪ್ರಿಲ್ ಒಂದರಂದು ವರದಿಯಾಗಿರುವ ಸುದ್ದಿಯ ವಿವರ ಇಲ್ಲಿದೆ. ಇದನ್ನು ನಂಬುವುದೇ ಕಷ್ಟ ಎಂದು ನಿಮಗೆ ಅನಿಸಬಹುದು.

೩೧.೩.೨೦೦೭, ಶನಿವಾರದಂದು ಆಸ್ಟ್ರೇಲಿಯಾದ ಅತ್ಯಂತ ದೊಡ್ಡ ಹಾಗೂ ಪ್ರಸಿದ್ಧವಾದ ಸಿಡ್ನಿ ನಗರ ಒಂದು ಗಂಟೆಯ ಕಾಲ ಅಂಧಕಾರದಲ್ಲಿ ಮುಳುಗಿತು. ನಮ್ಮಲ್ಲಿ ಸರ್ವೇಸಾಮಾನ್ಯವಾಗಿರುವ ಅನಿವಾರ್ಯವಾದ ವಿದ್ಯುಚ್ಛೇದ (Load Shedding) ವನ್ನು ಅಲ್ಲಿನ ನಾಗರಿಕರು ಸ್ವತಃ ಬಯಸಿದರು. ನಗರದ ನಿವಾಸಿಗಳು, ಉದ್ಯಮಿಗಳು, ಅಂಗಡಿ ಹೋಟೆಲುಗಳ ಮಾಲಿಕರು ಎಲ್ಲರೂ ಸರಿಯಾಗಿ ಸಂಜೆ ೭.೩೦ಕ್ಕೆ ತಮ್ಮ ಎಲ್ಲ ವಿದ್ಯುತ್ ದೀಪಗಳನ್ನೂ ಆರಿಸಿಬಿಟ್ಟರು! ಚಂದ್ರಮನ ತಂಪಿನಲ್ಲಿ ನಗರ ವಿಶೇಷವಾಗಿ ಕಂಗೊಳಿಸುತ್ತಿತ್ತು. ದಶಕಗಳಿಂದ ನಿರಂತರವಾಗಿ ಉರಿಯುತ್ತಿದ್ದ ಕೊಕ ಕೋಲಾದ ಜಾಹೀರಾತು ಪ್ರಥಮ ಬಾರಿ ವಿರಾಮವನ್ನು ಹೇಳಿತು. ಮೇಣದ ಬತ್ತಿಯ ಬೆಳಕಿನ ವಿಶೇಷ ಒಕ್ಕೂಟಗಳು ಶಾಲೆ-ಕಾಲೇಜುಗಳಲ್ಲಿ ಹಾಗೂ ಹೋಟೆಲುಗಳಲ್ಲಿ ಸಂತಸ ತಂದವು. ಹೀಗೆ ಜನರೆಲ್ಲ ಒಕ್ಕೊರಲಿನಿಂದ ತಮ್ಮ ಕಾಳಜಿಯನ್ನು ವ್ಯಕ್ತಪಡಿಸಿದರು. ಕೇವಲ ವಿಜ್ಞಾನ ಸಂಕಿರಣಗಳಲ್ಲಿ ಚರ್ಚೆಗೊಳ್ಳುತ್ತಿದ್ದ ವಿಚಾರ ಅನುಷ್ಠಾನದ ಮಟ್ಟಕ್ಕೆ ಬಂದು ಜನಸಾಮಾನ್ಯರನ್ನು ಜಾಗೃತಗೊಳಿಸಿತು. ಇಂತಹ ಒಂದು ಜನಜಾಗೃತಿಯಾಗಲು ಬಹಳಷ್ಟು ಪರಿಶ್ರಮವೂ ಬೇಕಲ್ಲವೇ? The World Wildlife Fund (WWF) ಜಾಗತಿಕ ಪ್ರಾಣಿಜೀವ ನಿಧಿಯ ಅಧಿಕಾರಿಗಳು ನಗರದ ಅಧಿಕಾರಿ ವರ್ಗದೊಂದಿಗೆ ಹಾಗೂ ಒಂದು ಪತ್ರಿಕಾ ಮಂಡಳಿಯೊಂದಿಗೆ ಹತ್ತು ತಿಂಗಳ ಕಾಲ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಎಲ್ಲ ಕಡೆಗಳಿಂದಲೂ ನಿರೀಕ್ಷೆಗಿಂತ ಅಧಿಕವಾಗಿಯೇ ಪ್ರೋತ್ಸಾಹ ಹಾಗೂ ಸಮ್ಮತಿ ದೊರೆಯಿತು.

ಇಂತಹ ಒಂದು ಪ್ರಬಲವಾದ ಸಂದೇಶವನ್ನು ನಮ್ಮ ನಾಡಿನ ಜನರು ಎಂದು ಸ್ವೀಕರಿಸುವರು? ಪರಿಸರದ ಬಗ್ಗೆ ಕಾಳಜಿಯನ್ನು ಹೊಂದುವುದು ಪ್ರಜ್ಞಾವಂತ ನಾಗರಿಕನ ಲಕ್ಷಣ. ವಿದ್ಯುಚ್ಛಕ್ತಿಯನ್ನು ಮಿತವಾಗಿ ಬಳಸುವುದು, ಫ್ಯಾನ್, ಟಿ.ವಿ. ಇತ್ಯಾದಿ ಸಲಕರಣೆಗಳನ್ನು ಬೇಡದಿದ್ದಾಗ ಆರಿಸುವುದು, ಸೌರಶಕ್ತಿಯನ್ನು ಬಳಸುವುದು, ಬಿಸಿಯನ್ನು ಉಂಟುಮಾಡುವ ಬಲ್ಬ್‌ಗಳ ಬದಲು CFL ಬಲ್ಬ್‌ಗಳನ್ನು ಬಳಸುವುದು—ಇಂತಹ ಸರಳವಾದ ಕ್ರಮಗಳಿಂದ ಕಿಂಚಿತ್ ಬದಲಾವಣೆಯನ್ನು ತರುವುದು ನಮ್ಮಿಂದಲೂ ಸಾಧ್ಯ. ಅಸಾಧ್ಯವೆಂಬುದು ಯಾವುದೂ ಇಲ್ಲ. ಇಚ್ಛೆಯಿದ್ದರೆ ಮಾರ್ಗ ಇದೆ. ಮಿತವಾಗಿ ಬಳಸಿ ಉಳಿಸಿದ ವಿದ್ಯುಚ್ಛಕ್ತಿಯನ್ನು ಎಲ್ಲ ಸೌಲಭ್ಯಗಳಿಂದಲೂ ವಂಚಿತರಾದ ಹಳ್ಳಿ, ಗ್ರಾಮಾಂತರ ಪ್ರದೇಶಗಳ ಜನರ ಬೇಡಿಕೆಗಳನ್ನು ಪೂರೈಸಲು ಬಳಸಬಹುದು. ಆಧುನಿಕತೆಯ ಹೆಸರಿನಲ್ಲಿ ನಗರಗಳಲ್ಲಿ ನಡೆಯುತ್ತಿರುವ ಸಂಪನ್ಮೂಲಗಳ ದುಂದುವೆಚ್ಚ ತಿಳಿಗೇಡಿತನವಲ್ಲವೇ?

